**AECKA25**

Reg. No. | | | | | | | | |

**II Semester B.C.A./B.VOC./D.S./A.I. Degree Examination, June - 2025**

ಗಣಕ ಸಂಪದ

ಯಯಾತಿ, ಭಾರತೀಪುರ

**(SEP Scheme Fresher)**

**PAPER : 2**

**Time : 3 Hour** **Maximum Marks : 80**

**I.** ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (5×2=10)

1. ಶರ್ಮಿಷ್ಠೆ ಯಾರು?
2. ತನಗೆ ಯೌವ್ವನ ಬೇಕಾಗಿರುವುದು ಏತಕ್ಕಾಗಿ ಎಂದು ಯಯಾತಿ ತಿಳಿಸಿದ?
3. ಯಯಾತಿ ಯಾರಿಂದ ಏನೆಂದು ಶಾಪಕ್ಕೆ ಗುರಿಯಾದನು?
4. ಪುರು ಆಶ್ರಮದಲ್ಲಿದ್ದಾಗ ಕಲಿತದ್ದು ಏನನ್ನು?
5. ಹೊಲೆಯರು ಮಂಜುನಾಥನ ದೇವಸ್ಥಾನವನ್ನು ಪ್ರವೇಶಿಸಿದಲ್ಲಿ ಏನಾಗುತ್ತದೆಂದು ಜನರು ನಂಬಿದ್ದರು?
6. ರಾಘವ ಪುರಾಣಿಕರಿಗೆ ಊರು ಬಹಿಷ್ಕಾರ ಹಾಕಲು ಕಾರಣವನ್ನು ತಿಳಿಸಿ.
7. ಚೌಡ ಸತ್ತಿದ್ದು ಹೇಗೆ?
8. ಜಗನ್ನಾಥ ಯಾರ್‍ಯಾರ ವಿಚಾರಗಳಿಂದ ಪ್ರಭಾವಿತನಾಗಿದ್ದನು?

**II.** ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (6×5=30)

1. ಶುಕ್ರಾಚಾರ್ಯರ ಶಾಪ ತಿಳಿದೊಡನೆ ಯಯಾತಿಯ ವರ್ತನೆ ಹೇಗಿತ್ತು?
2. ಪುರುವು ಅರಮನೆಗೆ ಬರುವ ದಿನದಂದೆ ದೇವಯಾನಿ ಅರಮನೆಯನ್ನು ಬಿಟ್ಟುಹೋದ ಹಿನ್ನಲೆಯನ್ನು ತಿಳಿಸಿ.
3. ಶರ್ಮಿಷ್ಠೆಯನ್ನು ದೇವಯಾನಿ ಅರಮನೆಯ ದಾಸಿಯನ್ನಾಗಿ ಮಾಡಿಕೊಂಡ ಸಂದರ್ಭವನ್ನು ಬರೆಯಿರಿ.
4. "ಜನ್ಮಾಂತರದ ಋಣವೊಂದನ್ನು ತೀರಿಸಲು ಬಂದಂತೆ ಬಂದ ಚಿತ್ರಲೇಖೆ" ಪುರುವಿನ ಈ ಮಾತಿನ ಹಿನ್ನಲೆಯನ್ನು ವಿವರಿಸಿ.

[P.T.O.

5. ಶ್ರೀಪತಿರಾಯರ ಹೆಂಡತಿ ಭಾಗ್ಯಮ್ಮ ತನ್ನ ಮನೆಯ ಸಂಕಷ್ಟವನ್ನು ಜಗನ್ನಾಥನಲ್ಲಿ ಹೇಗೆ ವ್ಯಕ್ತಪಡಿಸಿದಳು?
6. ಮಂಜುನಾಥನ ಮಹಿಮೆಯಲ್ಲಿ ನಿಂತ ವೆಂಕಟರಾಯ ಪ್ರಭುಗಳ ವ್ಯಾಪಾರ ಕುರಿತು ಬರೆಯಿರಿ.
7. ನಾಗರಾಜ ಜೋಯಿಸರ ಆತಿಥ್ಯದ ನಡುವೆ ಜಗನ್ನಾಥ ನಾಗಮಣಿಯನ್ನು ಕಂಡದ್ದು ಹೇಗೆ?
8. ಸುಬ್ರಾಯ ಅಡಿಗರು ಕಾದಂಬರಿಯಲ್ಲಿ ಚಿತ್ರಿತಗೊಂಡ ಬಗೆಯನ್ನು ಬರೆಯಿರಿ.

**III. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ.**

**(4×10=40)**

1. ಪುರು ಮತ್ತು ಯಯಾತಿಯ ನಡುವೆ ಊಃಶಾಪದ ಬಗೆಗೆ ನಡೆದ ಸಂವಾದವನ್ನು ವಿವರಿಸಿ.
2. ಸ್ವರ್ಣಲತೆ ಚಿತ್ರಲೇಖೆಯ ಬಳಿ ತಿಳಿಸಿದ ತನ್ನ ಜೀವನ ವೃತ್ತಾಂತವನ್ನು ನಿರೂಪಿಸಿ.
3. ಚಿತ್ರಲೇಖೆಯ ಮರಣಕ್ಕೆ ಕಾರಣವೇನು? ಅದರಿಂದ ಉಂಟಾದ ಯಯಾತಿಯ ಮನೋಪರಿವರ್ತನೆಯನ್ನು ನಿರೂಪಿಸಿ.
4. ನರಸಿಂಹ ಸಾಲಿಗ್ರಾಮ ಮೊದಲು ಹೊಲೆಯರಿಗೆ ಸ್ಪರ್ಶವಾಗಬೇಕು ಎಂಬ ಪ್ರಸಂಗವನ್ನು ವಿವರವಾಗಿ ಬರೆಯಿರಿ.
5. ಹೊಲೆಯರನ್ನು ತಮ್ಮ ಜೀವನಕ್ಕೆ ಜವಾಬ್ದಾರರನ್ನಾಗಿ ಮಾಡ ಹೊರಟ ಜಗನ್ನಾಥನ ಪಯಣ ಹೇಗಿತ್ತು? ವಿವರಿಸಿ.
6. ಗಣೇಶ ಪಾಪನಾಶಿನಿ ಹೊಂಡದಲ್ಲಿ ಲಿಂಗ ಹಾಕಿದ ಪ್ರಸಂಗವನ್ನು ನಿರೂಪಿಸಿ.

---